ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ ಜಿಲ್ಲೆ ಹಾವೇರಿ

ಭೂ ಸ್ವಾಧೀನ, ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್‌ನಿರ್ಮಾಣ
ಕಾಯ್ದೆ-2013ರ (ದಿನಾಂಕ:-01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ)ರೊಂದಿಗೆ
ಓದಲಾದ ಕಲಂ 11(1) ರಲ್ಲಿ ಮಾಡಿದ ಅಧಿಸೂಚನೆ.

ನಂ:DC-HAV-15022(1)/82/2016-HAV-LAQ. ದಿನಾಂಕ:-16-11-2016

ಈ ಕೆಳಗಿನ ಅನುಸೂಚಿಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಹಾವೇರಿ ತಾಲೂಕ ನೆಲೋಗಲ್ ಗ್ರಾಮದ ಜಮೀನಿನಲ್ಲಿ ತುಂಗಾ ಮೇಲ್ದಂಡೆ ನೀರಾವರಿ ಯೋಜನೆಯ ಮುಖ್ಯ ಕಾಲುವೆ ರ ನಿರ್ಮಾಣದ ಸಲುವಾಗಿ ಬೇಕಾಗಬಹುದೆಂದು, ಜಿಲ್ಲಾಧಿಕಾರಿಗಳು ಹಾವೇರಿ ಇವರಿಗೆ ಕಂಡು ಬಂದಿದೆ.

ಈ ಮೂಲಕ ತಿಳಿಸುವುದೇನಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 ರ (ದಿನಾಂಕ:-01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕರ್ನಾಟಕ ಸರಕಾರದ ಆದೇಶ ಸಂ:ಕಂಇ:18:ಆರ್‌ಇಎಚ್:2014 ದಿನಾಂಕ:-6-2-2014 ರಂತೆ ಹೊಸ ಕಾಯ್ದೆ-2013 ರ ಕಲಂ 11 ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30ನೇ ಕಾಯ್ದೆ) ಸದರ ಕಾನೂನಿನ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು ಹಾವೇರಿ ಇವರು ಈ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧಿನಾದಿಕಾರಿಗಳು ತುಂಗಾ ಮೇಲ್ದಂಡೆ ಯೋಜನೆ ರಾಣೆಬೆನ್ನೂರ ಇವರಿಗೆ ನೀಡಲಾಗಿದೆ. ಹಾಗೂ 43 ರ ಮೇರೆಗೆ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ವಿಶೇಷ ಭೂಸ್ವಾಧಿನಾದಿಕಾರಿಗಳು ತುಂಗಾ ಮೇಲ್ದಂಡೆ ಯೋಜನೆ ರಾಣೆಬೆನ್ನೂರ ಇವರಿಗೆ ನೀಡಲಾಗಿದೆ.

ಸರಕಾರದ ಆದೇಶ ಸಂ:ಕಂಇ:36:ಭೂಸ್ವಾವಿ:2014 ದಿನಾಂಕ:-13-03-2014 ರನ್ವಯ ಮತ್ತು ತಿದ್ದುಪಡಿ ಆದೇಶ ದಿನಾಂಕ:-22-04-2014 ರನ್ವಯ ಕಲಂ 6(2) ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂ ಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environmental Impact Assessment) ಪ್ರಕ್ರಿಯೆಯನ್ನು ಬೇರಾವುದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ನಿರ್ಧರಣದ ಅಂಶ (Social Impact Assessment) ತುಂಗಾ ಮೇಲ್ದಂಡೆ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಸ್ಪಷ್ಟೀಕರಿಸಿದೆ.

2013 ರ ಕಾಯ್ದೆ ಕಲಂ 15(1) ರ ಮೇರೆಗೆ ಆಸಕ್ತಿವುಳ್ಳವರು ತಮ್ಮ ತಂಟೆ-ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗೆ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು , ಪುನ
ರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 ರ ಕಾಯ್ದೆ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ , ಭೋಗ್ಯಕ್ಕೆ ಅಡವಿಡುವ , ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಅನುಸೂಚಿ

ಜಿಲ್ಲೆ : ಹಾವೇರಿ ತಾಲೂಕ : ಹಾವೇರಿ ಹೋಬಳಿ : ಕರಜಗಿ ಗ್ರಾಮ :ನೆಲೋಗಲ್

ಅ. ನಂ	ಖಾತೆದಾರರ ಹೆಸರು		ಅನುಭವದಾರರ ಹೆಸರು ಮತ್ತು ಋಣಭಾರ ಹಿಸ್ಸಾ	ಜಮೀನಿನ ಸ್ವಾಧೀನತೆ		ವಿಸ್ತೀರ್ಣ	ಆಕಾರ	ಚಕ್ಕಬಂದಿ			
				ರಿ.ಸ.ನಂ. ಹಿಸ್ಸಾ ನಂ.	ಮಣ್ಣಿನ ನಮೂನೆ			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2		3	4	5	6	7	8	9	10	11
1	ಬಾಳಿಮರದ ಬಸನಗೌಡ ಬಿನ್ ಶಿದ್ದನಗೌಡ	0-18	ಗ್ರಾ.ಸೇಸ.ಸಂ	10/ಅ	ಮಡಿಕಟ್ಟು	0-01	0.08	20	17	11	ರಸ್ತೆ
	ಭಾರತ ಸರಕಾರ ರಾಷ್ಟ್ರೀಯ ಹೆದ್ದಾರಿ ನಂ-4 ಶಿದ್ದನಗೌಡ ನೀಲಮ್ಮ ಉರ್ಫ ನೀಲವ್ವ ಕೋಂ ರೇವಣಶಿದ್ದನಗೌಡ	1-00	-	10/ಎ+ಬಿ	ಯರಿ ಮಡಿಕಟ್ಟು	0-01	0.08	20	17	11	ರಸ್ತೆ

1	2		3	4	5	6	7	8	9	10	11
	ಶಿದ್ದನಗೌಡ ದುಂಡೆಪ್ಪಗೌಡ ಬಿನ್ ಶಿವನಗೌಡ ಶಿದ್ದನಗೌಡ್ರ ದುಂಡರಪ್ಪಗೌಡ ಶಿದ್ದನಗೌಡ ಶಿವರುದ್ರಗೌಡ ಬಿನ್ ಶಿವನಗೌಡ ಅ.ಸ.ದಾರ ತಾಯಿ ಪಾರ್ವತ್ವ ಶಿದ್ದನಗೌಡ ನಿಂಗನಗೌಡ ಬಿನ್ ಈರಣ್ಣಗೌಡ										
2	ಸಂಣಿಗಮ್ಮನವರ ಬಸನಗೌಡ ದುಂಡರಪ್ಪಗೌಡ	0–20	ವಿ.ಎಸ್.ಎಸ್.ಬಿ ನೆಲೋಗಲ್ಲ	11	ಯರಿ ಮಡಿಕಟ್ಟು	0–20	1.37	20	17	18	10
3	ಶಿದ್ದನಗೌಡ ಶಂಕರಗೌಡ ಶಿದ್ದನಗೌಡ	1–14	ಪಿ.ಎಲ್.ಡಿ.ಬಿ ಹಾವೇರಿ	12	ಯರಿ ಮಡಿಕಟ್ಟು	1–07	0.33	10	9	17	ರಸ್ತೆ
4	ಪ್ರಭುಗೌಡ್ರ ಚನ್ನಗೌಡ ಚನಬಸನಗೌಡ	0–38	–	13/2	ಯರಿ ಮಡಿಕಟ್ಟು	0–08	0.66	10	9	16	ರಸ್ತೆ
5	ಡಿಳ್ಳೆಪ್ಪನವರ ನಿಂಗಪ್ಪ ಬಿನ್ ಸೋಮಪ್ಪ	1–26	ಪ್ರಾ.ಕೃ.ಪ.ಸ.ಸಂ ನೆಲೋಗಲ್ಲ	18/2	ಯರಿ ಮಡಿಕಟ್ಟು	0–04	0.30	ಹಳ್ಳ	ರಸ್ತೆ	19	17
6	ಭಾರತ ಸರಕಾರ ರಾಷ್ಟ್ರೀಯ ಹೆದ್ದಾರಿ ನಂ–4	0–01	–	20/3ಬ/4	ಯರಿ ಮಡಿಕಟ್ಟು	0–03	0.04	ಹಳ್ಳ	ರಸ್ತೆ	19	22
7	ಬಣಕಾರ ಹನಮಂತಪ್ಪ ಶಂಕ್ರಪ್ಪ	4–32	ಕೆನರಾ ಬ್ಯಾಂಕ ಹಾವೇರಿ	26/2ಬಿ	ಕಪ್ಪು ಮಡಿಕಟ್ಟು	0–01	0.07	ಹಳ್ಳ	ಗಡಿ	ಗಡಿ	ಹಳ್ಳ
8	ಕರಿದ್ಯಾಮಣ್ಣನವರ ನಾಗಪ್ಪ ಸಣ್ಣಿಂಗಪ್ಪ ಸಿದ್ದನಗೌಡ ವೀರನಗೌಡ ಬಿನ ರುದ್ರಗೌಡ ಸಿದ್ದನಗೌಡ ಭೀಮನಗೌಡ	2–00 2–03	ವಿ.ಎಸ್.ಎಸ್.ಬಿ. ನೆಲೊಗಲ್ ಪಿ.ಎಲ್.ಡಿ.ಬಿ ಹಾವೇರಿ	28/4ಅ 28/4ಬಿ	ಖುಷ್ಕಿ ಖುಷ್ಕಿ	2–25	8.65	ಹಳ್ಳ	ಹಳ್ಳ	27	29
9	ಶಿದ್ದನಗೌಡ್ರ ಭರಮನಗೌಡ ಪರ್ವತಗೌಡ ಭಾರತ ಸರಕಾರ ರಾಷ್ಟ್ರೀಯ ಹೆದ್ದಾರಿ ನಂ–4 ಸಂಣಿಂಗಮ್ಮನವರ 1. ಬಸನಗೌಡ ದುಂಡೆಪ್ಪಗೌಡ ಸಂಣಿಂಗಮ್ಮನವರ ಕಲ್ಲನಗೌಡ ಬಿನ್ ರುದ್ರಗೌಡ ಸಂಣಿಂಗಮ್ಮನವರ ಬಸನಗೌಡ ಬಿನ್ ರುದ್ರಗೌಡ ಸಂಣಿಂಗಮ್ಮನವರ ಶಂಕರಗೌಡ ಬಿನ್ ರುದ್ರಗೌಡ ಸಂಣಿಂಗಮ್ಮನವರ ಹನುಮಂತಗೌಡ ಬಿನ್ ಶಿದ್ದನಗೌಡ	3–02	ವಿ.ಎಸ್.ಎಸ್.ಬಿ ನೆಲೋಗಲ್ಲ	30/4+7	ಯರಿ	0–15	1.02	ಹಳ್ಳ	12	18	81
					ಒಟ್ಟು	5–05					

P.R. No. 897.

(ಟಿ. ಬಿ. ಪ್ರಕಾಶ)
ವಿಶೇಷ ಭೂಸ್ವಾಧೀನಾಧಿಕಾರಿಗಳು
ತುಂಗಾ ಮೇಲ್ದಂಡೆ ಯೋಜನೆ, ರಾಯಚೂರು

16/11/16
ಜಿಲ್ಲಾಧಿಕಾರಿಗಳು, ಹಾವೇರಿ.